ನಿರ್ಮಿಸಲಾಗುತ್ತಿರುವ ಸೇತುವೆ ಕಾಮಗಾರಿಯು ಆಯವ್ಯಯದ ಲೆಕ್ಕಶೀರ್ಷಿಕೆ 5054 ರಸ್ತೆ ಮತ್ತು ಸೇತುವೆ ಮೇಲ್ದರ್ಜೆಗೇರಿಸಿದ ರಸ್ತೆ ಯೋಜನೆ ಅಡಿಯಲ್ಲಿ ರೂ. 230.00 ಲಕ್ಷ ಅಂದಾಜಿಗೆ ಮಂಜೂರಾತಿ ನೀಡಲಾಗಿದೆ. ಈ ಕಾಮಗಾರಿಗೆ ಈವರೆಗೆ ಸರ್ಕಾರದಿಂದ ರೂ. 136.70 ಲಕ್ಷ ಬಿಡುಗಡೆ ಆಗಿರುತ್ತದೆ.

ಆ) ಈ ಕಾಮಗಾರಿಯನ್ನು ಮೆ: ಆದಿತ್ಯ ಕನ್‌ಸ್ಟ್ರಕ್ಷನ್ ಕಂಪನಿ ಗುತ್ತಿಗೆದಾರರು ಮತ್ತು ಇಂಜಿನಿಯರರು, ಬೆಳಗಾವಿ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ. ಸದರಿ ಕಾಮಗಾರಿಯನ್ನು ಡಿಸೆಂಬರ್ 2000ದ ಹೊತ್ತಿಗೆ ಪೂರ್ಣಗೊಳಿಸುವ ಯೋಜನೆ ಹೊಂದಿದೆ. ಆದರೆ ಸದರಿ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಅನುದಾನದ ಕೊರತೆಯಿರುತ್ತದೆ.

ಇ) ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆ ಕರಾರಿನ ಪ್ರಕಾರ 15-12-2000 ಇರುತ್ತದೆ. ಅನುದಾನದ ಕೊರತೆಯಿಂದ, ಈ ಕಾಮಗಾರಿಯನ್ನು 153 ಸೇತುವೆಗಳ ನಿರ್ಮಾಣದ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ.

ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ ನ್ಯಾಯಾಲಯವನ್ನು ಬೆಳಗಾಂನಿಂದ ಚಿಕ್ಕೋಡಿಗೆ ವರ್ಗಾಯಿಸುವ ಕುರಿತು

3124 - ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗಾ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕೋಡಿಯ ಬಾರ್ ಅಸೋಸಿಯೇಷನ್‌ರವರು ಬೆಳಗಾಂನ ಒಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಚಿಕ್ಕೋಡಿಗೆ ಸ್ಥಳಾಂತರಿಸಲು ಸರ್ಕಾರಕ್ಕೆ ಮನವಿಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದರೆ ಈ ಸಂಬಂಧದಲ್ಲಿ ಪ್ರಸ್ತಾವನೆ ಇದೆಯೇ?*

ಇ) *ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮವೇನು?*

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :

ಅ) ಹೌದು.

ಆ) ಹೌದು.

ಇ) ಸರ್ಕಾರವು ಮೇಲಿನ ಪ್ರಸ್ತಾವನೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದೊಂದಿಗೆ ವ್ಯವಹರಿಸುತ್ತಿದ್ದು, ಅದರ ಬಗ್ಗೆ ಪರಿಶೀಲಿಸುತ್ತಿದೆ.